411(112) : ಶ್ರೀ ಆಶೋಕ್ ಆರ್. (ಉತ್ತರಹಳ್ಳಿ) : ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರೇಷ್ಮೆ ಸಂಶೋಧನಾ ಅಭಿವೃದ್ಧಿ ಸಂಸ್ಥೆಯ ನೌಕರರುಗಳಿಗೆ ಕಳೆದ 5–6 ವರ್ಷಗಳಿಂದ ಸರಿಯಾಗಿ ವೇತನವನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ರೇಷ್ಮೆ ಸಂಶೋಧನಾ ಇಲಾಖೆಯು ತೀವ್ರವಾಗಿ ಆರ್ಥಿಕ ಸಂಕಷ್ಟವನ್ನೆದುರಿಸುತ್ತಿದ್ದು. ಸಂಬಳ ಪಾವತಿಸಲು ಮತ್ತು ಅಭಿವೃದ್ಧಿ ಸಂಶೋಧನೆಗೆ ಹಣಕಾಸಿನ ಲಭ್ಯತೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಈ ನಿಟ್ಟಿನಲ್ಲಿ ಸರ್ಕಾರದ ಯೋಜನೇತರ ಇಲಾಖೆಯ ಬೆಲೆ ಸ್ಥಿರೀಕರಣ ನಿಧಿ ಹಾಗೂ ಕೇಂದ್ರದ ಯೋಜನಾ ಅನುದಾನಕ್ಕಾಗಿ ಯಾವ ಅನುಕೂಲವನ್ನು ಕಲ್ಪಿಸಲಾಗಿದೆ ;

ಈ) ಸಂಸ್ಥೆಯ ನೌಕರರಿಗೆ ನಿಯಮಿತವಾದ ವೇತನದೊಂದಿಗೆ ಸೇವಾ ಸೌಲಭ್ಯ. ವಿಜ್ಞಾನಿ ನೌಕರರಿಗೆ ಇತರ ಸಂಸ್ಥೆಗಳಿಗೆ ಹೋಲಿಕೆಯಾಗುವ ವೇತನ ಶ್ರೇಣಿ, ಪಿಂಚಣಿ ಸೌಲಭ್ಯಗಳು ಸರ್ಕಾರದ ಮಟ್ಟಲದಲಿ ಇನ್ನು ಇತ್ಯರ್ಥವಾಗದೇ ಇರಲು ಕಾರಣವೇನು ?

ಶ್ರೀ ಚೆನ್ನಿಗಪ್ಪ (ರೇಷ್ಮೆ ಸಚಿವರು)

ಅ) ಈ ಸಂಸ್ಥೆಯಲ್ಲಿ ಕಳೆದ 5–6 ವರ್ಷಗಳಿಂದ ಆರ್ಥಿಕ ಸಂಕಷ್ಟವಿದ್ದರೂ ಸಹ ಡಿಸೆಂಬರ್ 2004ರ ಮಾಹೆಯವರೆಗೆ ಬಾಕಿ ಇಲ್ಲದಂತೆ ವೇತನ ಪಾವತಿಸಲಾಗಿದೆ. ಈ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಂಡಿದೆ.

ಆ) ಬಂದಿದೆ.

ಇ) ಬೆಲೆ ಸ್ಥಿರೀಕರಣ ನಿಧಿಯಿಂದ 2000 ರಿಂದ ಇತ್ತೀಚಿನವರೆಗೂ 7 ಕಾರ್ಯಕ್ರಮಗಳಿಗಾಗಿ ಅನುದಾನ ಬಿಡುಗಡೆಯಾಗಿರುವ ಒಟ್ಟು ಮೊತ್ತ ರೂ. 22.32 ಲಕ್ಷಗಳಾಗಿರುತ್ತದೆ. ಹೆಚ್ಚಿನ ಹಣಕಾಸಿನ ಬಿಡುಗಡೆಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಸರ್ಕಾರದ ಆದೇಶಗಳನ್ನು ಆಗಿಂದ್ದಾಗೆ ಯಥಾವತ್ತಾಗಿ ಜಾರಿಗೊಳಿಸಿ ವೇತನ ಮತ್ತು ಸೇವಾ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ. ಪಿಂಚಣಿ ಸೌಲಭ್ಯಕ್ಕೆ ಸಂಬಂಧಿಸಿದಂತೆ ಎಲ್.ಐ.ಸಿ. ಯಿಂದ ಸಂಸ್ಥೆಯ ನೌಕರರಿಗೆ ಸೌಲಭ್ಯವನ್ನು ವಿಸ್ತರಿಸಲು ಕ್ರಮ ವಹಿಸುವಂತೆ ಸೂಚಿಸಿದೆ.

412(227) : ಶ್ರೀ ಆರ್. ಆಶೋಕ್ ಮತ್ತು ಶ್ರೀ ಪಿ.ಸಿ. ಮೋಹನ್(ಉತ್ತರಹಳ್ಳಿ) : ಮಾನ್ಯ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಹೊರವಲಯದಲ್ಲಿ ರಫ್ತು ಉತ್ತೇಜನಾ ಕೈಗಾರಿಕಾ ಪಾರ್ಕ್ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆಯೇ :

ಆ) ಈ ಉದ್ದೇಶಕ್ಕೆ ವಶಪಡಿಸಿಕೊಳ್ಳಲಾಗಿರುವ ಜಮೀನು ಎಷ್ಟು :

ಇ) ವಶಪಡಿಸಿಕೊಳ್ಳಲಾಗಿರುವ ಜಮೀನಿನ ಒಟ್ಟು ಮೌಲ್ಯ ಎಷ್ಟು :

ಈ) ಜಮೀನನ್ನು ವಶಪಡಿಸಿಕೊಂಡ ನಂತರ ಜಮೀನಿಗೆ ಪರಿಹಾರ ನೀಡಲಾಗಿದೆಯೇ ;

ಉ) ನಿಯಮಾವಳಿಗಳನ್ನು ಗಾಳಿಗೆ ತೂರಿ ವಶಪಡಿಸಿಕೊಳ್ಳಲಾಗಿದ್ದ ಜಮೀನನ್ನು ಉದ್ದೇಶಕ್ಕೆ

ಊ) ನಿಯಮಾವಳಿಗಳನ್ನು ಉಲ್ಲಂಘಿಸಿರುವ ಪ್ರಕರಣದಲ್ಲಿ ಸರ್ಕಾರ ಯಾರನ್ನು ತಪಿತಸ್ಥರೆಂದು ಗುರುತಿಸಿದೆ.

ಋ) ಅವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಭಾರತ ಸರ್ಕಾರವು 28ನೇ ಸೆಪ್ಟೆಂಬರ್ 1994ರಲ್ಲಿ ಬೆಂಗಳೂರಿನ ಹೂಡಿ ಹತ್ತಿರ ರಫ್ತು ಉತ್ತೇಜನಾ ಕೈಗಾರಿಕಾ ಪಾರ್ಕ್ ಸ್ಥಾಪಿಸಲು ಅನುಮೋದನೆ ನೀಡಿರುತ್ತದೆ, ರಾಜ್ಯ ಸರ್ಕಾರವೂ ಸಹಾ ದಿನಾಂಕ:31-10-1995ರಲ್ಲಿ ಈ ಯೋಜನೆಗೆ ಅನುಮೋದನೆ ನೀಡಿರುತ್ತದೆ,

ಆ)

ಹಂತ	ಸರ್ಕಾರಿ ಜಮೀನು	ಖಾಸಗಿ ಜಮೀನು	ಒಟ್ಟು ಎ-ಗು
1	166.06	136.02	302.08
2	23.13	288.29	312.02
ಒಟ್ಟು	189.19	424.31	614.10

ಇ)ವಶಪಡಿಸಿಕೊಳ್ಳಲಾದ ಜಮೀನಿಗೆ ತಗಲುವ ಅಂದಾಜು ವೆಚ್ಚ ರೂ. 47,48,42,422-00 ಗಳಾಗಿರುತ್ತದೆ.

ಈ) ಇದುವರೆಗೆ ರೂ. 40,59,08,895-00 ಗಳ ಭೂಪರಿಹಾರವನ್ನು ಪಾವತಿಸಲಾಗಿದ್ದು, ಬಾಕಿ ಉಳಿದಿರುವ ರೂ. 66,89,33,527-00 ಗಳನ್ನು ಪಾವತಿಸಬೇಕಾಗಿರುತ್ತದೆ.

ಉ) ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದ-ಜಮೀನನ್ನು ಮಾರಾಟ ಮಾಡಿರುವುದಿಲ್ಲ. ಆದರೆ ಏಕಗವಾಕ್ಷಿ ಸಮಿತಿ: ಉನ್ನತ ಮಟ್ಟದ ಸಭೆಯ ನಿರ್ಣಯದಂತೆ ಇತರೆ ಉದ್ದೇಶಕ್ಕಾಗಿ 15 ಘಟಕಗಳಿಗೆ ಜಮೀನನ್ನು ಹಂಚಿಕೆ ಮಾಡಲಾಗಿದ್ದು, ವಿವರಗಳನ್ನು ಅನುಬಂಧ-ಅರಲ್ಲಿ ಒದಗಿಸಲಾಗಿದೆ.

ಊ) --ಉದ್ಭವಿಸುವುದಿಲ್ಲ-

ಋ) --ಉದ್ಭವಿಸುವುದಿಲ್ಲ-

ಅನುಬಂಧ-ಅ

ಕ್ರಮ ಸಂಖ್ಯೆ	ಘಟಕದ ಹೆಸರು	ಚಟುವಟಿಕೆ	ವಿಸ್ತೀರ್ಣ(ಎಕರೆಗಳಲ್ಲಿ)
1	ಶ್ರೀ ಸತ್ಯ ಸಾಯಿ ಸೆಂಟ್ರಲ್ ಟ್ರಸ್ಟ್	ಸ್ಟೂಪರ್ ಸ್ಪೆಷಾಲಿಟಿ ಆಸ್ಪತ್ರೆ	52.00
2	ಡಿಸ್ಟೆಂಟ್ ಲರ್ನಿಂಟ್ ಇಂಟರ್ ನೆಟ್ ಇಂಡಿಯಾ ಲಿಮಿಟೆಡ್	ವೈದ್ಯಕೀಯ ಕಾಲೇಜು	33.57
3	ಸನ್ ರೈಸ್ ಇಂಡಿಯಾ ಇಂಟಾಕ್ಟಿವ್ ಲಿಮಿಟೆಡ್	ಬಯೋ ಟಕ್ನಾಲಜಿ	23.90
4	ಯೋಷಿತಾ ಹೈಟೆಕ್ ಇಂಟರ್ ನ್ಯಾಷನಲ್	ಹೋಟೆಲ್	0.13

5	ಇಂಡಿಯನ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಹೋಟೆಲ್	0.90
6	ಫೇರ್‌ಮೌಂಟ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಬಿಸನಸ್ ಕ್ಲಾಸ್ 4 ಸ್ಟಾರ್ ಹೋಟೆಲ್	2.00
7	ಇನ್‌ಮಾರ್ ಟೂರಿಸಂ ಅಂಡ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಬಿಸನೆಸ್ ಕ್ಲಾಸ್ 3 ಸ್ಟಾರ್ ಹೋಟಲ್	3.00
8	ಆದರ್ಶ ರಿಯಾಲಿಟಿ ಅಂಡ್ ಹೋಟಲ್ಸ್ ಪ್ರೈವೇಟ್ ಲಿಮಿಟೆಡ್	ಬಿಸನೆಸ್ ಕ್ಲಾಸ್ ಹೋಟಲ್	1.70
9	ಶ್ರೀ ಕೃಷ್ಣ ಕೇಟರರ್ಸ್	ಹೋಟಲ್	0.125
10	ಬಾಲಾಜಿ ಕಾರ್ಪೋರೇಷನ್ ಸರ್ವಿಸಸ್	ಹೋಟಲ್ ಕಾಂಪ್ಲೆಕ್ಸ್	0.50
11	ಸಾಯಿಕೃಷ್ಣ ಎಂಟರ್‌ಪ್ರೈಸಸ್	ಸರ್ವಿಸ್ ಸ್ಟೇಷನ್	0.50
12	ಎನ್.ವಿ.ಟಿ. ಕ್ವಾಲಿಟಿ ಸರ್ಟಿಫಿಕೇಷನ್ ಪ್ರೈವೇಟ್ ಲಿಮಿಟೆಡ್	ಟ್ರೈನಿಂಗ್ ಸೆಂಟರ್	0.33
13	ಸತ್ಯ ಸಾಯಿ ಟೂರಿಸ್ಟ್(ರಿ)	ಪಾರ್ಕಿಂಗ್ ಸೌಲಭ್ಯಕ್ಕಾಗಿ	0.40
14	ಚಾಲುಕ್ಯ ರೆಸಾರ್ಟ್ಸ್	ಹೋಟೆಲ್‌ಗಾಗಿ	20.00
15	ಗೋಪಾಲನ್ ಎಂಟರ್ ಪ್ರೈಸಸ್	S.T.P. ಗಾಗಿ	15.23

413(1093) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನಲ್ಲಿ ವಕ್ಫ್ ಬೋರ್ಡಿಗೆ ಸಂಬಂಧಿಸಿದ ಆಸ್ತಿಗಳು ಎಷ್ಟು :

ಆ) ಈ ಆಸ್ತಿಗಳಲ್ಲಿ ಕೆಲವರು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಬಂದಿದ್ದಲ್ಲಿ, ಸರ್ಕಾರ ಅತಿಕ್ರಮಣದ ವಿರುದ್ಧ ಕೈಗೊಳ್ಳುವ ಕ್ರಮಗಳೇನು :

ಈ) ಈ ಅತಿಕ್ರಮಣ ಆಸ್ತಿಯ ಮೌಲ್ಯವೆಷ್ಟು; ಇದನ್ನು ಅತಿಕ್ರಮಿಸಿಕೊಂಡಿರುವವರು ಯಾರು, ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು (ವಿವರ ಒದಗಿಸಿರಿ) ?

ಶ್ರೀ ಮಿರಾಜದ್ದೀನ್ ಎನ್ ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು)